# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೬– ಬಿ<br>Part – VI - B | ಬೆಳಗಾವಿ, ಶುಕ್ರವಾರ, ನವೆಂಬರ್ ೨೧, ೨೦೨೫ (ಕಾರ್ತಿಕ ಮಾಸ ೩೦, ಶಕವರ್ಷ, ೧೯೪೭)<br>BELAGAVI, FRIDAY, NOVEMBER 21, 2025 (KARTIKA MASA 30, SHAKAVARSHA, 1947) | ನಂ. ೦೯<br>No. 09 |
|---|---|---|

ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

**ಉಪ ವಿಭಾಗಾಧಿಕಾರಿಗಳ ಕಾರ್ಯಾಲಯ, ಜಮಖಂಡಿ ಜಿಲ್ಲೆ:ಬಾಗಲಕೋಟೆ**

**OFFICE OF THE ASSISTANT COMMISSIONER, JAMAKHANDI DIST:BAGALKOTE**

Tel: 08353-220007 E-Mail: acjmkd@gmail.com

NO.ACJKD-ELEC/6/2025 (C.NO.396404) ದಿನಾಂಕ:20.11.2025

## <u>ಪ್ರಾಥಮಿಕ ಅಧಿಸೂಚನೆ</u>

ಕರ್ನಾಟಕ ಪುರಸಭೆಗಳ ಕಾಯ್ದೆ 1964 ರ ಕಾಲಂ 13 ರ ಪ್ರಕಾರ ಅವಧಿ ಮುಗಿದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಕುರಿತು ಕರ್ನಾಟಕ ಸರಕಾರದ ನಗರಾಭಿವೃದ್ಧಿ ಇಲಾಖೆ ಬೆಂಗಳೂರು ಇವರ ಆದೇಶ ಸಂ.ನಅಇ/231/ಎಮ್.ಎಲ್.ಆರ್/2021(e) ದಿನಾಂಕ:30.06.2025 ರ ಪ್ರಕಾರ ಹದ್ದಿ ವಿಸ್ತರಣೆ ಕೈಗೊಂಡಿದ್ದರಿಂದ ಸನ್ 2011 ರ ಜನಗಣತಿ ಆಧಾರದ ಮೇಲೆ ಕ್ಷೇತ್ರ ಪುನರ್ ವಿಂಗಡಣೆ ಮಾಡುವುದು ಅವಶ್ಯವಿದ್ದು ಬೀಳಗಿ ಪಟ್ಟಣ ಪಂಚಾಯತಿಗೆ ಸನ್ 2011 ರ ಜನಗಣತಿ ಆಧರಸಿ 18 ವಾರ್ಡ ಸದಸ್ಯರನ್ನು ಆಯ್ಕೆ ಮಾಡಬೇಕಾಗಿರುವುದರಿಂದ ಸರಕಾರದ ಆದೇಶ ಕ್ರ.ಸಂ.ಯು.ಡಿ.ಡಿ/104/ ಡಿ.ಡಮ್.ಎಸ್/2014 ದಿನಾಂಕ:09.01.2015 ನೇದರಲ್ಲಿ ಉಪವಿಭಾಗಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಿದರನ್ವಯ ಬಾಗಲಕೋಟೆ ಜಿಲ್ಲೆಯ ಜಮಖಂಡಿ ಉಪವಿಭಾಗಾಧಿಕಾರಿಯಾದ ನಾನು ಶ್ರೀಮತಿ ಶ್ವೇತಾ ಬೀಡಿಕರ (ಕೆ.ಎ.ಎಸ್), ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಬೀಳಗಿ ಪಟ್ಟಣ ಪಂಚಾಯತಿಗೆ ಸಂಬಂಧಿಸಿದಂತೆ

ವಾರ್ಡುಗಳ ವಿಂಗಡಣೆ ಕಾರ್ಯವನ್ನು ಜರುಗಿಸಿ ಈ ಕೆಳಗೆ ನಮೂದಿಸಿರುವ ಅಂಶಗಳನ್ನು ನಿರ್ಧರಿಸಲು ಉದ್ದೇಶಿಸಿ ಲಗತ್ತಿಸಿದ ಅನುಬಂಧ-1 ರಂತೆ ಈ ಮೂಲಕ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿರುವೆನು (ಅನುಬಂಧ-1 ವಾರ್ಡವಾರು ಚೆಕ್ ಬಂದಿಗಳನ್ನು ನಮ್ಮ ಕಾರ್ಯಾಲಯ ಹಾಗೂ ತಹಶೀಲ್ದಾರ ಕಾರ್ಯಾಲಯ, ಬೀಳಗಿ, ಮತ್ತು ಪಟ್ಟಣ ಪಂಚಾಯತ ಕಾರ್ಯಾಲಯ ಬೀಳಗಿ ಇವರುಗಳ ನೋಟಿಸ್ ಬೋರ್ಡಿಗೆ ಲಗತ್ತಿಸಿದೆ).

ಎ. ಬೀಳಗಿ ಪಟ್ಟಣ ಪಂಚಾಯತಿಯ 18 ವಾರ್ಡುಗಳಲ್ಲಿ ವಿಂಗಡಿಸಲಾಗಿದೆ.

ಬಿ. ಪ್ರತಿ ವಾರ್ಡಿನ ಚೆಕ್ ಬಂದಿ (ಕ್ಷೇತ್ರದ) ವಿವರವನ್ನು ಅನುಬಂಧ-1 ರ ಕಾಲಂ 3 ವಿವರಿಸಲಾಗಿದೆ.

ಸಿ. ಪ್ರತಿ ವಾರ್ಡಿನ ಜನಸಂಖ್ಯೆಯ ವಿವರವನ್ನು ಅನುಬಂಧ-1ರ ಕಾಲಂ 4 ರಲ್ಲಿ ವಿವರಿಸಿದ್ದು, ಪ್ರತಿ ವಾರ್ಡಿಗೆ ಒರ್ವ ಸದಸ್ಯರನ್ನು ಚುನಾಯಿಸಲು ನಿರ್ಧರಿಸಲಾಗಿದೆ.

ಡಿ. ಪ್ರತಿ ವಾರ್ಡಿನ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗ ಹಾಗೂ ಮಹಿಳೆಯರ ಮೀಸಲಾತಿಯನ್ನು ಸರಕಾರದಿಂದ ನಿರ್ಧರಿಸಲ್ಪಡುವುದು.

ಈ ಅಧಿಸೂಚನೆಯಿಂದ ಭಾದಿತರಾಗಬಹುದಾದ ಯಾವುದೇ ವ್ಯಕ್ತಿಗಳು ಉಪವಿಭಾಗಾಧಿಕಾರಿಗಳು ಜಮಖಂಡಿ ರವರಿಗೆ ತಮ್ಮ ಆಕ್ಷೇಪಣೆ ಮತ್ತು ಸಲಹೆಗಳನ್ನು ಈ ಅಧಿಸೂಚನೆ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಹದಿನೈದು (15) ದಿನಗಳ ಒಳಗಾಗಿ ಸಲ್ಲಿಸಬಹುದೆಂದು ಈ ಮೂಲಕ ಸಾರ್ವಜನಿಕ ತಿಳುವಳಿಕೆ ನೀಡಲಾಗಿದೆ. ನಿಗಧಿತ ಅವಧಿ ಮೀರಿ ಬಂದ ಯಾವುದೇ ಸಲಹೆ ಹಾಗೂ ಆಕ್ಷೇಪಣೆಗಳನ್ನು ಪುಸ್ಕರಿಸಲಾಗುವುದಿಲ್ಲ.

(ಶ್ವೇತಾ ಬೀಡಿಕರ್) ಕೆ.ಎ.ಎಸ್.
ಉಪವಿಭಾಗಾಧಿಕಾರಿಗಳು
ಜಮಖಂಡಿ

## ನಗರ ಸ್ಥಳೀಯ ಸಂಸ್ಥೆಯ ಹೆಸರು – ಪಟ್ಟಣ ಪಂಚಾಯತ ಬೀಳಗಿ

**ಅನುಬಂಧ–1**

**ಬೀಳಗಿ ಪಟ್ಟಣ ಪಂಚಾಯತ ಕ್ಷೇತ್ರ ಪುನರ್ ವಿಂಗಡಣೆ ಮಾಡಿದ ವಿವರ**

| ಕ್ರ. ಸಂ | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | | 3 | 4 |
| 01 | 01 | ಉತ್ತರಕ್ಕೆ | ವಾಯುವ್ಯ ಮೂಲೆಯ ಜಮಖಂಡಿ–ಬೀಳಗಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ ರಿ.ಸ.ನಂ.448ಎ, 447ಎ, 446ಎ, 445ಎ, 457ಎ, 445ದಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಚಲಿಸಿ ತಾಲೂಕಾ ಆಸ್ಪತ್ರೆ ಮುಂದಿನ ರಸ್ತೆ ಗುಂಟಾ ಸಾಗಿ ಸಿಂಧೂರ ಲಕ್ಷ್ಮಣ ಸರ್ಕಲ್ ಸುತ್ತುವರೆದು ಬಲಗಡೆ ದಕ್ಷಿಣಕ್ಕೆ ತಿರುವು ಪಡೆದು ಪೋಲೀಸ್ ಠಾಣೆ ಮುಂದೆ ಹಾಯ್ದು ಯಮನರೂಪ್ಪ ದರ್ಗಾ ಮುಂದೆ ಹಾಯ್ದು ಶಿವಾಜಿ ಸರ್ಕಲ್ ಬಲಗಡೆ ಮಾಡಿಕೊಂಡು ಪೂರ್ವಾಭಿಮುಖವಾಗಿ ಚಲಿಸಿ | 914 |

| ಕ್ರ. ಸಂ | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | | 3 | 4 |
| | | | ಸುಭಾಸ ಬೀಳಗಿ ಹಾಗೂ ಯಂಕಂಚಿರವರ ಮನೆ ಮುಂದಿನ ರಸ್ತೆ ಗುಂಟಾ ಸಾಗಿ ಶ್ರೀ ಅಡಿವೆಪ್ಪ ಕೆರೂರ ಮನೆಯವರೆಗೆ ತಲುಪುವುದು. | |
| | | ದಕ್ಷಿಣಕ್ಕೆ | ನೈಋತ್ಯ ಮೂಲೆಯಲ್ಲಿರುವ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದ ರಿ.ಸ.ನಂ.436, 435, 434, 433, 431, 432, 412, 426, 425, 419, 420ರಿಂದ ಪ್ರಾರಂಭವಾಗಿ ಮುರಾರ್ಜಿ ವಸತಿ ಶಾಲೆ ಮುಂದಿನ ರಸ್ತೆ ಗುಂಟಾ ಸಾಗಿ ನಾಗರಾಳ ತಾಂಡಾ–ಬೀಳಗಿ ರಸ್ತೆ ಗುಂಟಾ ಸಾಗಿ ರಿ.ಸ.ನಂ. 417, 418, 416 ಜಮೀನ ಗುಂಟಾ ಸಾಗಿ ಶ್ರೀ ಸಿದ್ದೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆ ತಲುಪುವುದು. | |
| | | ಪೂರ್ವಕ್ಕೆ | ಈಶಾನ್ಯ ದಿಕ್ಕಿನ ಅಡಿವೆಪ್ಪ ಕೆರೂರ ಮನೆಯಿಂದ ಪ್ರಾರಂಭವಾಗಿ ನೇಕಾರ ಓಣಿ ರಸ್ತೆ ಗುಂಟಾ ಸಾಗಿ ಶ್ರೀ ನೂರಅಲಿ ತಹಶೀಲ್ದಾರ ಮನೆಯ ಮುಂದಿನ ರಸ್ತೆ ಗುಂಟಾ ಹಾಯ್ದು ಪರಪ್ಪ ಸೊನ್ನ ಮನೆಯಿಂದ ಬಲ ಭಾಗಕ್ಕೆ ತಿರುವು ಪಡೆದು ಹೊಸಮಠಕ್ಕೆ ಹೋಗುವ ರಸ್ತೆ ಗುಂಟಾ ಸಾಗಿ ದೇಸಾಯಿ ವಾಡೆ ಗುಂಟಾ ಸಾಗಿ ಶ್ರೀಸಿದ್ದೇಶ್ವರ ದೇವಸ್ಥಾನಕ್ಕೆ ಹೋಗುವ ಮುಖ್ಯ ರಸ್ತೆಗೆ ಸೇರಕೊಂಡು ದಕ್ಷಿಣಾಭಿಮುಖವಾಗಿ ತಿರುವು ಪಡೆದು ಅದೇ ರಸ್ತೆಗುಂಟ ಚಲಿಸಿ ತಾಲೂಕಾ ಪಂಚಾಯತ, ಅಣ್ಣಿಗೇರಿ ಕಿರಾಣಿ ಅಂಗಡಿ ಹಾಗೂ ಖಾರಾ ಕುಟ್ಟುವ ಯಂತ್ರದ ಮುಂದೆ ಹಾಯ್ದು ಬಲಭಾಗಕ್ಕೆ ಬರುವ ಎಲ್ಲಾ ಆಸ್ತಿಗಳನ್ನು ಸೇರಿಸಿಕೊಂಡು ಶ್ರೀ ಸಿದ್ದೇಶ್ವರ ದೇವಸ್ಥಾನ ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಲ್ಲಿರುವ ಬೀಳಗಿ ಜಮಖಂಡಿ ಮುಖ್ಯ ರಸ್ತೆಯಿಂದ ರಿ.ಸ.ಸಂ.448ಎ ರಿಂದ ಪ್ರಾರಂಭವಾಗಿ ರಿ.ಸನಂ. 438, 437, 436 ಸಾಗಿ ನೈರುತ್ಯ ಮೂಲೆ ತಲುಪುವದು. | |

| ಕ್ರ.ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| 02 | 02 | ಉತ್ತರಕ್ಕೆ | ವಾಯುವ್ಯ ಮೂಲೆಯಲ್ಲಿರುವ ಶ್ರೀ ಸಿದ್ದೇಶ್ವರ ದೇವಸ್ಥಾನದ ಮುಖ್ಯ ರಸ್ತೆಯಿಂದ ಪ್ರಾರಂಭವಾಗಿ ದೇಸಾಯಿಯವರ ವಾಡೆ ಗುಂಟಾ ಸಾಗಿ ಶ್ರೀಕಾಳಮ್ಮ ದೇವಸ್ಥಾನ ಮುಂದೆ ಹಾಯ್ದು ಶ್ರೀಮತಿ ಉಮಾಬಾಯಿ ಶಶಿಕಾಂತ ಕನ್ಮಡಿ ರವರ ಮನೆಯವರೆಗೆ ತಲುಪುವುದು. | 917 |
| | | ದಕ್ಷಿಣಕ್ಕೆ | ನೈಋತ್ಯ ಮೂಲೆಯಲ್ಲಿರುವ ಚರಂತಿಮಠ ಮನೆಯಿಂದ ಪ್ರಾರಂಭವಾಗಿ ಪೂರ್ವಾಭಿಮುಕವಾಗಿ ಚಲಿಸಿಶ್ರೀಲಕ್ಷ್ಮೀ ದೇವಸ್ಥಾನ ಮುಂದೆ ಹಾಯ್ದು ಶ್ರೀ ಆರ್.ಎಸ್.ವಸ್ತ್ರದ ಮನೆಮುಂದೆ ಹಾಯ್ದು ಶ್ರೀ ಸಂಪತ್ತಕುಮಾರ ಪಂಚಕಟ್ಟಿ ಇವರ ಮನೆಯ ಆಗ್ನೇಯ ಮೂಲೆಗೆ ತಲುಪುವುದು. | |

| ಕ್ರ.ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| | | ಪೂರ್ವಕ್ಕೆ | ಈಶಾನ್ಯ ಮೂಲೆಯ ಶ್ರೀಮತಿ ಉಮಾಬಾಯಿ ಶಶಿಕಾಂತ ಕನ್ಮಡಿಯವರ ಮನೆಯಿಂದ ಪ್ರಾರಂಭವಾಗಿ ಕಲಬುರ್ಗಿ ಇವರ ಮನೆ,ಶ್ರೀನೀಲಕಂಠೇಶ್ವರ ಮಠದ ಮುಂದೆ ಹಾಯ್ದು ಅದೇ ರಸ್ತೆಯಿಂದ ಎಡಕ್ಕೆ ತಿರುವುಪಡೆದು ಬಲಭಾಗಕ್ಕೆ ಬರುವ ಶ್ರೀ ಈರಯ್ಯ ವಸ್ತ್ರದ ಮನೆ ಮುಂದೆ ಹಾಯ್ದು ಶ್ರೀಯಲ್ಲಮ್ಮನ ಗುಡಿಯ ಮುಂದೆ ಬಲಕ್ಕೆ ತಿರುವು ಪಡೆದು ರಾಮ್ಮಣ್ಣ ಸಾರಾವರಿ ಮನೆ,ಸಂಗಪ್ಪ ಎಸ್ ಡಂಗಿ ಇವರ ಮನೆ ಮುಂದೆ ಹಾಯ್ದು ಆಗ್ನೇಯ ದಿಕ್ಕಿನಲ್ಲಿರುವ ಶ್ರೀ ಸಂಪತ್ತಕುಮಾರ ಪಂಚಕಟ್ಟಿ ಇವರ ಮನೆಯನ್ನು ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯ ಶ್ರೀ ಸಿದ್ದೇಶ್ವರ ದೇವಸ್ಥಾನ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಶ್ರೀಮತಿ ಶಾರಾದಾಬಾಯಿ ವಸ್ತ್ರದ ಇವರ ಮನೆಯಿಂದ ಪ್ರಾರಂಭವಾಗಿ ಸಿದ್ದು ಸಾರಾವರಿ ಹಾಗೂ ಶ್ರೀ ಪುರವಂತಪ್ಪಗಂಜ್ಯಾಳ ಖಾನಾವಳಿ ಮುಂದಿನ ರಸ್ತೆ ಗುಂಟಾ ಸಾಗಿ ವಿಶ್ವಕರ್ಮ ರವರ ಮನೆಯ ಮುಂದೆ ಹಾಯ್ದು ಚರಂತಿಮಠ ಸರ್ ಮನೆ ತಲುಪುವುದು. | |

| ಕ್ರ. ಸಂ | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| 03 | 03 | ಉತ್ತರಕ್ಕೆ | ವಾಯುವ್ಯ ಮೂಲೆಯಲ್ಲಿರುವ ಸಿದ್ದಣ್ಣ ಕೆರೂರ ಮನೆಯಿಂದ ಪ್ರಾರಂಭವಾಗಿ ಪೂರ್ವಭಿಮುಖವಾಗಿ ಚಲಿಸಿ, ಸಿದ್ದಪ್ಪ ಅಂಗಡಿ ಹಾಗೂ ಗುರುಸಿದ್ಧೇಶ್ವರ ಬ್ಯಾಂಕ್ ಮುಂದೆ ಹಾಯ್ದು ಪಟ್ಟಣ ಪಂಚಾಯತಿಯ ವಾಣಿಜ್ಯ ಮಳಿಗೆ ಉತ್ತರ ಈಶಾನ್ಯ ಮೂಲೆ ತಲುಪುವುದು. | 975 |
| | | ದಕ್ಷಿಣಕ್ಕೆ | ನೈಋತ್ಯ ಮೂಲೆಯ ಈರಯ್ಯ ಗೋಠೆಯವರ ಮನೆಯಿಂದ ಪ್ರಾರಂಭವಾಗಿ ಶ್ರೀಮತಿ ಲಕ್ಷೀಬಾಯಿ ಪಾಟೀಲ್ ಇವರ ಮನೆಯ ಮುಂದೆ ಹಾಗೂ ರಜಪೂತ ಇವರ ಮನೆಯ ಮುಂದೆ ಹಾದುಬಲಕ್ಕೆ ತಿರುವು ಪಡೆದು ಪೂವಾಭಿಮುಖವಾಗಿ ಚಲಿಸಿ ದಕ್ಷಿಣ ಆಗ್ನೇಯ ದಿಕ್ಕಿನಲ್ಲಿ ಸಿದ್ದಣ್ಣ ಹಳ್ಳೂರ ಇವರ ಮನೆಯನ್ನು ತಲುಪುವುದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯ ಪಟ್ಟಣ ಪಂಚಾಯತ ಮಳಿಗೆಯಿಂದ ಪ್ರಾರಂಭವಾಗಿ ಗೌಡರ ಓಣಿ ರಸ್ತೆ ಗುಂಟಾ ಸಾಗಿ ಶ್ರೀ ಶಂಕರ ನಿಂಬಾಳಕರ, ಶ್ರೀ ಜಿ.ಜಿ.ದಿಕ್ಷೀತ ಹಾಗೂ ತಾನಾಜಿ ಘೋರ್ಪಡೆ ಇವರ ಮನೆಯ ಮುಂದೆ ಹಾಯ್ದು ಪೂರ್ವ ಆಗ್ನೇಯ ದಿಕ್ಕಿನಲ್ಲಿ ಇರುವ ಸಿದ್ದಣ್ಣ ಹಳ್ಳೂರ ಇವರ ಮನೆ ತಲುಪುವುದು. | |

| ಕ್ರ. ಸಂ | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| | | ಪಶ್ಚಿಮಕ್ಕೆ | ವಾಯುವ್ಯ ದಿಕ್ಕಿನಲ್ಲಿರುವ ಶ್ರೀ ಸಿದ್ದಣ್ಣ ಕೆರೂರ ಇವರ ಮನೆಯಿಂದ ಪ್ರಾರಂಭವಾಗಿ ನೇಕಾರ ಓಣಿ ರಸ್ತೆ ಗುಂಟಾ ಸಾಗಿ ಶ್ರೀನೀಲಕಂಠೇಶ್ವರ ದೇವಸ್ಥಾನದ ರಸ್ತೆ ಮುಂದೆ ಇರುವ ನೈಋತ್ಯ ದಿಕ್ಕಿನಲ್ಲಿರುವ ಶ್ರೀ ಈರಯ್ಯ ಗೋಠೆ ಇವರ ಮನೆ ತಲುಪುವುದು. | |

| ಕ್ರ. ಸಂ | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| 04 | 04 | ಉತ್ತರಕ್ಕೆ | ವಾಯುವ್ಯ ದಿಕ್ಕಿನಲ್ಲಿರುವ ಕೊತ್ತಲೇಶ್ವರ ದೇವಸ್ಥಾನದಿಂದ ಪ್ರಾರಂಭವಾಗಿ ತರಕಾರಿ ಮಾರ್ಕೇಟ್ ರಸ್ತೆ ಗುಂಟಾ ಸಾಗಿ ಉತ್ತರ ಈಶಾನ್ಯ ಮೂಲೆಯಲ್ಲಿ ಇರುವ ರವಿ ಜಂಭಗಿ ಅಂಗಡಿ ತಲುಪುವುದು. | 1118 |
| | | ದಕ್ಷಿಣಕ್ಕೆ | ನೈಋತ್ಯ ಮೂಲೆಯಲ್ಲಿರುವ ಎಮ್. ಎನ್. ಪಾಟೀಲ ಇವರ ಹಳೆಯ ಪ್ರೀಂಟಿಂಗ್ ಪ್ರೇಸ್‌ದಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಚಲಿಸಿ ಶುದ್ಧ ಕುಡಿಯುವ ನೀರಿನ ಘಟಕದ ಮುಂದೆ ಹಾಯ್ದು ಶ್ರೀ ಸುಲ್ತಾನಸಾಬ ಜಮಖಂಡಿ ಶ್ರೀ ಗುರಪ್ಪ ಮೋದಿರವರ ಮನೆಯ ಮುಂದಿನ ರಸ್ತೆ ಗುಂಟಾ ಸಾಗಿ ದಕ್ಷಿಣ ದಿಕ್ಕಿನ ಆಗ್ನೇಯ ಮೂಲೆಯಲ್ಲಿ ಇರುವ ಶ್ರೀ ಡಿ.ಬಿ. ಮಮದಾಪೂರ ಇವರ ಅಂಗಡಿಯನ್ನು ತಲುಪುವುದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯ ರವಿ ಜಂಭಗಿ ಇವರ ಅಂಗಡಿಯಿಂದ ಪ್ರಾರಂಭವಾಗಿ ಕಾಟಕರ ಓಣಿ ರಸ್ತೆಯ ಗುಂಟಾ ಸಾಗಿ ಆಗ್ನೇಯ ಮೂಲೆಯ ಡಿ.ಬಿ. ಮಮದಾಪೂರ ಇವರ ಅಂಗಡಿಯನ್ನು ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ದಿಕ್ಕಿನಲ್ಲಿರುವ ಕೊತ್ತಲೇಶ್ವರ ದೇವಸ್ಥಾನದಿಂದ ಪ್ರಾರಂಭವಾಗಿ ರಾಮೇಶ್ವರ ಗುಡಿ, ವಿಠ್ಠಲ ದೇವಸ್ಥಾನ, ಮೌನೇಶ ಬಡಿಗೇರ ಹಾಗೂ ಎಸ್.ಎಸ್. ಪಾಟೀಲ ಇವರ ಮನೆ ಮುಂದೆ ಹಾಯ್ದು ಪಾಪು ಹಳ್ಳೂರ ರವರ ಮನೆ ಶ್ರೀ ಎಮ್.ಎನ್. ಪಾಟೀಲ ಇವರ ಪ್ರಿಂಟಿಂಗ್ ಪ್ರೆಸ್ ತಲುಪುವುದು. | |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| 05 | 05 | ಉತ್ತರಕ್ಕೆ | ವಾಯುವ್ಯ ಮೂಲೆಯಲ್ಲಿರುವ ಶ್ರೀ ರಾಮಣ್ಣ ಮನೆಯಿಂದ ಪ್ರಾರಂಭವಾಗಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿಗಳ ವಸತಿ ನಿಲಯವನ್ನು ಬಲಕ್ಕೆ ಮಾಡಿಕೊಂಡು ಪೂರ್ವಾಭಿಮುಖವಾಗಿ ಅಶೋಕ ಮಿಟ್ಟಲಕೋಡ ಇವರ ಹಿಟ್ಟಿನ | 846 |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| | | | ಗಿರಣಿ ಮುಂದೆ ಹಾಯ್ದು ರಾಚವ್ವ ಮಡಿವಾಳ ಮನೆ ತಲುಪುವದು. | |
| | | ದಕ್ಷಿಣಕ್ಕೆ | ನೈರುತ್ಯ ಮೂಲೆಯಲ್ಲಿರುವ ಸರಕಾರಿ ರುದ್ರಗೌಡ ಪಾಟೀಲ ಕಾಲೇಜ ಕಂಪೌಂಡ ಗೋಡೆಯಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಗುಡ್ಡದ ಹದ್ದಿಗುಂಟ ಚಲಿಸಿ ಆಗ್ನೇಯ ಮೂಲೆಯಲ್ಲಿರುವ ಮೇಲಿನ ದುರ್ಗಾದೇವಿ ದೇವಸ್ಥಾನಕ್ಕೆ ಹೋಗುವ ರಸ್ತೆ ತಲುಪುವದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯಲ್ಲಿರುವ ಶ್ರೀಮತಿ ರಾಚವ್ವ ಮಡಿವಾಳರ ಮನೆಯಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಚಲಿಸಿ ಸಿದ್ದಪ್ಪ ಉಕ್ಕಲಿ ಅವರ ಮನೆಯನ್ನು ಬಲಕ್ಕೆ ಮಾಡಿಒಕೊಂಡು ಸರಕಾರಿ ರುದ್ರಗೌಡ ಪದವಿ ಕಾಲೇಜ ಕಂಪೌಂಡಿಗೆ ತಲುಪುವದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಲ್ಲಿರುವ ಶ್ರೀ ರಾಮಣ್ಣ ಮಂಕಣಿ ಮನೆಯಿಂದ ಪ್ರಾರಂಬವಾಗಿ ದಕ್ಷಿಣಾಭಿಮುಖವಾಗಿಚಲಿಸಿ ಚನ್ನಪ್ಪ ಹೆರಕಲ್ಲ ಕೃಷ್ಣಾ ರಜಪೂತ ಮನೆ ಮುಂದೆ ಹಾಯ್ದು ಸಿದೇಶ್ವರ ಗುಡಿ ರಸ್ತೆ ಸಾಗಿ ರುದ್ರಗೌಡ ಕಾಲೇಜ ಕಂಪೌಂಡ ತಲುಪುವದು. | |

| ಕ್ರ.ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| 06 | 06 | ಉತ್ತರಕ್ಕೆ | ವಾಯುವ್ಯ ಮೂಲೆಯಲ್ಲಿರುವ ದೊಂಡಿಬಾ ಬೋರ್ಜಿ ರವರ ಮನೆಯಿಂದ ಪ್ರಾರಂಭವಾಗಿ ಪೂರ್ವಕ್ಕೆ ಚಲಿಸಿ ಗಾಮಪ್ಪ ಮಾಳೋಜಿ ಮಲ್ಲಪ್ಪ ಪೂಜೇರಿ ಈರವ್ವ ಕುಂಬಾರ ಮನೆ ಮುಂದೆ ಹಾಯ್ದು ಡಾ॥ ವೈದ್ಯ ಅವರ ಮನೆ ಬಲಕ್ಕೆ ಮಾಡಿಕೊಂಡು ಶ್ರೀಮತಿ ಜುಬೇದಾ ಅವರ ಮನೆ ಮುಂದೆ ಹಾಯ್ದು ಪೂವಾಭಿಮುಖವಾಗಿ ಸಾಗಿ ಜಂಪಣ್ಣ ಕಟ್ಟಿಮನಿ ಮನೆ ಮುಂದೆ ಸಾಗಿ ಶಿವಕ್ಕ ಬಿದರಿ ಮನೆಗೆ ಬಂದು ತಲುಪುವದು. | 846 |
| | | ದಕ್ಷಿಣಕ್ಕೆ | ನೈರುತ್ಯ ಮೂಲೆಯಲ್ಲಿರುವ ಶ್ರೀ ಶಿದರಾಯ ಅಣ್ಣಿಗೇರಿ ಅವರ ಶೆಡ್ಡಿನಿಂದ ಪ್ರಾರಂಭವಾಗಿ ಗವಿಯಪ್ಪ ಗಾಣಿಗೇರ ಮನೆ ಮುಂದೆ ಸದಾಶಿವ ಅಥಣಿ ಮನೆ ಯಡಕ್ಕೆ ಮಾಡಿಕೊಂಡು ಪೂರ್ವಾಭಿಮುಖವಾಗಿ ಚಲಿಸಿ ಯಂಕಪ್ಪ ಮೇರಾಕರ ಆಗ್ನೇಯ ಮೂಲೆಯಲ್ಲಿರುವ ಬಸಪ್ಪ ಮಮದಾಪೂರ ಮನೆ ತಲುಪುವದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯಲ್ಲಿರುವ ಶ್ರೀಮತಿ ಶಿವಕ್ಕ ಕರಿಯಪ್ಪ ಬಿದರಿ ಸುರೇಶ ಮಮದಾಪೂರ ಮನೆಯನ್ನು ಬಲಕ್ಕೆ ಮಾಡಿಕೊಂಡು ದಕ್ಷಿಣಾಭಿಮುಖವಾಗಿ ಚಲಸಿ ಸಂಗಪ್ಪ ಹೆಳವರ ಮನೆಯನ್ನು ಬಲಕ್ಕೆ ಮಾಡಿಕೊಂಡು ಆಗ್ನೇಯ ಮೂಲೆಯಲ್ಲಿರುವ ಬಸಪ್ಪ ಮಮದಾಪೂರ ಮನೆ ತಲುಪುವದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಲ್ಲಿರುವ ಶ್ರೀ ದೊಂಡಿಬಾ ಬೋರ್ಜಿ ಯವರ ಮನೆಯಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ | |

| ಕ್ರ.ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| | | | ಚಲಿಸಿ ಎಲ್ಲಾ ಆಸ್ತಿಗಳನ್ನು ಎಡಕ್ಕೆ ಮಾಡಿಕೊಂಡು ಆಗ್ನೇಯ ಮೂಲೆಯಲ್ಲಿರುವ ಶ್ರೀ ಶಿದ್ದರಾಯಪ್ಪ ಅಣ್ಣಿಗೇರಿ ಶೆಡ್ಡ್ ತಲುಪುವದು. | |

| ಕ್ರ. ಸಂ | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| 07 | 07 | ಉತ್ತರಕ್ಕೆ | ವಾಯುವ್ಯ ಮೂಲೆಯಲ್ಲಿರುವ ಶ್ರೀ ನಿಂಗಪ್ಪ ದಂದರಗಿ ಇವರ ಮನೆಯ ಮುಂದೆ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಚಲಿಸಿ ರಂಗಪ್ಪ ಲಕ್ಕನ್ನವರ ಹಾಗೂ ಬಾಬು ಬೀಳಗಿಯವರ ಮನೆಯ ಮುಂದೆ ಹಾಯ್ದು ಹಳ್ಳದ ದಂಡೆಯ ಮೇಲಿರುವ ಶ್ರೀಮತಿ ಸತ್ಯೆವ್ವ ತಮ್ಮಣ್ಣ ಬಿದರಿ ಅವರ ಮನೆ ತಲುಪುವುದು. | 1034 |
| | | ದಕ್ಷಿಣಕ್ಕೆ | ನೈರುತ್ಯ ಮೂಲೆಯಲ್ಲಿರುವ ಗುಡ್ಡದ ಮೇಲಿನ ದುರ್ಗಾದೇವಿ ದೇವಸ್ಥಾನಕ್ಕೆ ಹೋಗುವ ರಸ್ತೆ ಪಕ್ಕದಲ್ಲಿರುವ ಕಂಪೌಂಡ ಗೋಡೆಯಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಗುಡ್ಡದ ಹದ್ದಿಗುಂಟಾ ಚಲಿಸಿ ಆಗ್ನೇಯ ಮೂಲೆಯಲ್ಲಿರುವ ಹಳ್ಳಕ್ಕೆ ತಲುಪುವುದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯಲ್ಲಿರುವ ಶ್ರೀಮತಿ ಸತ್ಯೆವ್ವ ತಮ್ಮಣ್ಣ ಬಿದರಿ ಮನೆಯಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಚಲಿಸಿ ಹಳ್ಳದ ಗುಂಟಾ ಸಾಗಿ ಎಲ್ಲಾ ಆಸ್ತಿಗಳನ್ನು ಬಲಕ್ಕೆ ಮಾಡಿಕೊಂಡು ಗುಡ್ಡಕ್ಕೆ ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಲ್ಲಿರುವ ಈರಪ್ಪ ನಿಂಗಪ್ಪ ಧಂಧರಗಿ ಮನೆಯಿಂದ ಪ್ರಾರಂಭವಾಗಿ ಎಡಭಾಗದ ಕಲ್ಲಪ್ಪ ಸುನಗ ಮನೆಯ ಮುಂದಿನ ರಸ್ತೆಗುಂಟಾ ಹಾಯ್ದು ಈರಪ್ಪ ಕಾರಜೋಳ ಹಾಗೂ ಹುಚ್ಚಪ್ಪನಕಟ್ಟೆ, ಮಲ್ಲಪ್ಪ ಹೆಳವರ್ ಮನೆ ಮುಂದೆ ಹಾಯ್ದು ಸ್ತ್ರೀಯರ ಶೌಚಾಲಯ ತಲುಪಿ ಬಲಕ್ಕೆ ತಿರುವು ಪಡೆದು ಸಿದ್ದಯ್ಯ ಗೋಠೆ ಮನೆಯ ಹತ್ತಿರ ತಲುಪಿ, ಶ್ರೀ ವಿಠ್ಠಲ ನಿಂಬಾಳಕರ ಮನೆಯ ಮುಂದೆ ಹಾಯ್ದು ಶ್ರೀ ಪರುವುತಪ್ಪ ಉಕ್ಕಲಿಯವರ ಮನೆ ಮುಂದೆ ಹಾಯ್ದು ಬಿಸಿಎಮ್ ಹಾಸ್ಟೇಲ ಎಡಕ್ಕೆ ಮಾಡಿಕೊಂಡು ಶ್ರೀ ರುದ್ರಗೌಡ ಪಾಟೀಲ ಪದವಿ ಕಾಲೇಜು ಕಂಪೌಂಡ ತಲುಪಿ ಎಡಕ್ಕೆ ತಿರುವು ಪಡೆದು ಗುಡ್ಡದ ಮೇಲಿನ ದುರ್ಗಾದೇವಿ ದೇವಸ್ಥಾನಕ್ಕೆ ಹೋಗುವ ಕಂಪೌಂಡ ಪಕ್ಕದಲ್ಲಿರುವರಸ್ತೆಗೆ ತಲುಪುವುದು. | |

| ಕ್ರ.ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| **1** | **2** | **3** | | **4** |
| 08 | 08 | ಉತ್ತರಕ್ಕೆ | ವಾಯುವ್ಯ ಮೂಲೆಯಲ್ಲಿರುವ ಮಂಜುಳಾ ವಿಠ್ಠಲ ಸುನಗದ ಇವರ ಮನೆಯಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ದುಂಡವ್ವ ದೊಡ್ಡಿಹಾಳ ಹಾಗೂ ಬಸವಂತ ಹಡಪದ ಅವರ ಮನೆಗಳನ್ನು ಬಲಕ್ಕೆ ಮಾಡಿಕೊಂಡು ಯಲ್ಲಪ್ಪ ಪಾತ್ರೋಟ ಅವರ ಮನೆ ತಲುಪುವದು. | 865 |
| | | ದಕ್ಷಿಣಕ್ಕೆ | ನೈಋತ್ಯ ಮೂಲೆಯ ಎಡಭಾಗದಲ್ಲಿರುವ ಬೀರೇಶ್ವರ ಹೈಸ್ಕೂಲ್‌ದಿಂದ ಪ್ರಾರಂಭವಾಗಿ ಅದೇ ರಸ್ತೆ ಗುಂಟಾ ಮುಂದೆ ಸಾಗಿ ಎಸ್.ಎಸ್.ನಾಗನಗೌಡ್ರ ಲೇಔಟ್‌ನ ಪ್ರಾರಂಭದ ನೈಋತ್ಯ ಮೂಲೆಗೆ ತಲುಪುವದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯಲ್ಲಿರುವ ಯಲ್ಲಪ್ಪ ಪಾತ್ರೋಟ ಮನೆಯಿಂದ ಪ್ರಾರಂಭವಾಗಿ ಬಾಬು ಬೀಳಗಿ ಇವರ ಬಲಗಡೆಯಿರುವ ಮುಂದಿನ ರಸ್ತೆಯಿಂದ ಮತ್ತು ಬಾಯವ್ವ ಕಂಬಾರ ರಸ್ತೆ ಮನೆಯ ಗುಂಟಾ ಸಾಗಿ ಬಸೀರ ಮಮದಾಪೂರ ಮನೆ ಮುಂದೆ ಹಾಯ್ದು ಬೀರೇಶ್ವರ ಹೈಸ್ಕೂಲ್ ಆಸ್ತಿಯ ಆಗ್ನೇಯ ಮೂಲೆಗೆ ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಲ್ಲಿರುವ ಮಂಜುಳಾ ವಿಠ್ಠಲ ಸುನಗದ ಇವರ ಮನೆಯಿಂದ ಪ್ರಾರಂಭವಾಗಿ ದಕ್ಷಿಣ ಮುಖವಾಗಿ ನಾರಾಯಣ ಬಂಡಿವಡ್ಡರ ಇವರ ಮನೆಯ ಎಡಭಾಗದ ಮುಂದಿನ ರಸ್ತೆ ಗುಂಟಾ ಸಾಗಿ ಚಿನ್ನಪ್ಪ ಬಂಡಿವಡ್ಡರ ಮನೆ ಮುಂದೆ ರಸ್ತೆ ಗುಂಟಾ ಹಾಯ್ದು ಬೀರೇಶ್ವರ ಹೈಸ್ಕೂಲ್‌ನ ನೈಋತ್ಯ ಮೂಲೆಗೆ ತಲುಪುವುದು. | |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| **1** | **2** | **3** | | **4** |
| 09 | 09 | ಉತ್ತರಕ್ಕೆ | ವಾಯುವ್ಯ ಮೂಲೆಯ ಹಳ್ಳದ ದಂಡೆಯ ಮೇಲಿರುವ ಶ್ರೀ ಎಸ್.ಎಸ್.ಸಂಗೊಂದಿಯವರ ಮನೆಯಿಂದ ಫ್ರಾರಂಭವಾಗಿ ಸದರಿ ಆಸ್ತಿಗಳನ್ನು ಬಲಕ್ಕೆ ಮಾಡಿಕೊಂಡು ಘೂರ್ವಾಭಿಮುಖವಾಗಿ ಚಲಿಸಿ ಜೈನಾಪೂರ ಅವರ ಮನೆಯಿಂದ ಎಡಕ್ಕೆ ತಿರುವು ಪಡೆದು ಶ್ರೀ ವ್ಹಿ.ಬಿ.ನಾಗರಾಳ ಅವರ ವಾಣಿಜ್ಯ ಮಳಿಗೆಯಿಂದ ಬಲಕ್ಕೆ ತಿರುವು ಪಡೆದು ಪೂರ್ವಾಭಿಮುಖವಾಗಿ ಚಲಿಸಿ ನಾಗನಗೌಡರ ವಾಣಿಜ್ಯ ಮಳಿಗೆ, ಶ್ರೀ ಎಸ್.ಎಸ್.ಪಾಟೀಲ ಇವರ ವಾಣಿಜ್ಯ ಮಳಿಗೆ(ಅಜ್ಜಾ ಕಾಂಪ್ಲೇಕ್ಸ್) ತಲುಪುವುದು. | 1140 |
| | | ದಕ್ಷಿಣಕ್ಕೆ | ನೈರುತ್ಯ ಮೂಲೆಯಲ್ಲಿರುವ ಶ್ರೀ ನಾಗನಗೌಡ ಶಂಕರಗೌಡ ನಾಗನಗೌಡರ ಇವರ ಆಸ್ತಿ ಸಂಖ್ಯೆ 1189K ದಿಂದಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಚಲಿಸಿ | |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| | | | ಗುಡ್ಡದ ಹದ್ದಿಗುಂಟಾಸಾಗಿ ಪಟ್ಟಣ ಪಂಚಾಯತ ಆಸ್ತಿ ಸಂ:1189ಎಚ್/74 ಯಲ್ಲಿರುವ ಅಂಗನವಾಡಿ ಕೇಂದ್ರ ತಲುಪುವುದು. | |
| | | ಪೂರ್ವಕ್ಕೆ | ಆಗ್ನೇಯ ಮೂಲೆಯಲ್ಲಿರುವ ಪಟ್ಟಣ ಪಂಚಾಯತ ಆಸ್ತಿಯಲ್ಲಿರುವ ಅಂಗನವಾಡಿ ಕೇಂದ್ರದಿಂದ ಪ್ರಾರಂಭವಾಗಿ ಉತ್ತರಾಭಿಮುಖವಾಗಿ ಚಲಿಸಿ ಶ್ರೀ ಶಂಕರ ಮೇಲ್ಗಡೆ ಅವರ ಮನೆಮುಂದೆ ಹಾಯ್ದು ಶ್ರೀ ಎಸ.ಎಸ್.ಪಾಟೀಲ ಇವರ ಆಸ್ತಿಯಲ್ಲಿರುವ ಗದ್ದುಗೆಯನ್ನು ಎಡಕ್ಕೆ ಮಾಡಿಕೊಂಡು ಶ್ರೀ ಎಸ್.ಎಸ್.ಪಾಟೀಲ ಇವರ ವಾಣಿಜ್ಯ ಮಳಿಗೆಗಳನ್ನು (ಅಜ್ಜಾ ಕಾಂಪ್ಲೇಕ್ಸ್) ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಲ್ಲಿರುವ ಹಳ್ಳದ ದಂಡೆಯ ಹತ್ತಿರವಿರುವ ಶ್ರೀ ಎಸ್.ಎಸ್.ಸಂಗೊಂದಿ ಇವರ ಮನೆಯಿಂದ ಸಾಗಿ ಧಕ್ಷಿಣಾಭಿಮುಖವಾಗಿ ಹಳ್ಳದ ಗುಂಟ ಸಾಗಿ ಶ್ರೀ ಭರಮಪ್ಪ ಗುಳಬಾಳ ಅವರ ಮನೆ ಹತ್ತಿರ ಎಡಕ್ಕೆ ತಿರುವು ಪಡೆದು ಪೂರ್ವಾಭಿಮುಖವಾಗಿ ಚಲಿಸಿ ಶ್ರೀ ಈರಪ್ಪ ಧಂಧರಗಿ ಇವರ ಮನೆ ಮುಂದೆ ಹಾಯ್ದು ಕಮಲವ್ವ ಪರಸಪ್ಪ ಹೆಳವರ ಇವರ ಮನೆ ಮುಂದೆ ಬಲಕ್ಕೆ ತಿರುವು ಪಡೆದು ದಕ್ಷೀಣಾಭಿಮುಖವಾಗಿ ಚಲಿಸಿ ಎಲ್ಲಾ ಆಸ್ತೀಗಳನ್ನು ಎಡಕ್ಕೆ ಮಾಡಿಕೊಂಡು ಶ್ರೀ ನಾಗನಗೌಡ ಎಸ್ ನಾಗನಗೌಡರ ಅವರ ಆಸ್ತಿ ಸಂ:1189K ಹದ್ದಿಗುಂಟಾ ಸಾಗಿ ಗುಡ್ಡಕ್ಕೆ ತಲುಪುವುದು. | |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| 10 | 10 | ಉತ್ತರಕ್ಕೆ | ವಾಯುವ್ಯ ಮೂಲೆಯಲ್ಲಿರುವ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಕಂಪೌಂಡ್‌ಹಾಗೂ ಸಾರ್ವಜನಿಕ ಶೌಚಾಲಯದಿಂದ ಪ್ರಾರಂಭವಾಗಿ ಬೀಳಗಿ–ಬಾಗಲಕೋಟ ಮುಖ್ಯ ರಸ್ತೆಗುಂಟಸಾಗಿ ಎಪಿಎಂಸಿ, ಪಿಎಲ್‌ಡಿ ಬ್ಯಾಂಕ್ ಮುಂದೆ ಹಾಯ್ದು ಈಶ್ಯಾನ್ಯ ಮೂಲೆಯಲ್ಲಿರುವ ಜಿಎಲ್.ಬಿಸಿ ಆಯ್.ಬಿಕಂಪೌಂಡ್‌ಹಾಗೂ ಶ್ರೀ ಗಲಗಲಿ ಇವರ ಮಳಿಗೆ ತಲುಪುವದು. | 1068 |
| | | ದಕ್ಷಿಣಕ್ಕೆ | ನೈರುತ್ಯ ಮೂಲೆಯಲ್ಲಿರುವ ಪಟ್ಟಣ ಪಂಚಾಯತ ಆಸ್ತೀ ಸಂ:1189N ದಿಂದ ಪ್ರಾರಂಭವಾಗಿ ಗುಡ್ಡದ ಹದ್ದಿಗುಂಟಸಾಗಿ ಬಿ.ಎಚ್.ಜೆ ಸರಕಾರಿ ಬಾಲಕಿಯರ ಪ್ರೌಢಶಾಲೆ ಎಡಕ್ಕೆ ಮಾಡಿಕೊಂಡ ಶ್ರೀ ದಂಡೆಪ್ಪ ಲಿಂಗಣ್ಣವರ ಮನೆಯನ್ನು ಎಡಕ್ಕೆ ಮಾಡಿಕೊಂಡು ಶ್ರೀ ಬೀರಪ್ಪ ಪೂಜಾರಿರವರ ಮನೆ ತಲುಪುವುದು. | |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| | | ಪೂರ್ವಕ್ಕೆ | ಈಶಾನ್ಯ ಮೂಲೆಯಲ್ಲಿರುವ ಶ್ರೀ ಗಲಗಲಿ ಇವರ ಮಳಿಗೆಯಿಂದ ಪ್ರಾರಂಭಿಸಿ ದಕ್ಷಿಣಕ್ಕೆ ಚಲಿಸಿ, ಬಸವರಾಜ ಬಡಿಗೇರ, ಅಮೀನಗಡ್ ಅವರ ಮನೆಯ ಗುಂಟಾಸಾಗಿ, ಯಮನಪ್ಪ ಎತ್ತಿನಮನಿ ಮುಂದೆ ಹಾಯ್ದು ಎಡಭಾಗಕ್ಕೆ ತಿರುವು ಪಡೆದು ಬಲಭಾಗದಲ್ಲಿರುವ ಶ್ರೀ ನಿಜಾಮುದ್ದಿನ ಮುಜಾವರ ಮನೆಯ ಮುಂದೆ ಸಾಗಿ ಶ್ರೀ ಬೀರಪ್ಪ ಪೂಜಾರಿರವರ ಮನೆ ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೊಲೆಯಲ್ಲಿರುವ ಕೆ.ಎಸ್.ಆರ್.ಟಿ.ಸಿ ಬಸಸ್ಟಾಂಡ ಕಂಪೌಂಡದಿಂದ ಪ್ರಾರಂಭಿಸಿ ದಕ್ಷೀಣಾಭಿಮುಖವಾಗಿ ಚಲಿಸಿ ಎಡಭಾಗಕ್ಕೆ ಬರುವ ಎಲ್ಲಾ ಆಸ್ತೀಗಳನ್ನು ಎಡಕ್ಕೆ ಮಾಡಿಕೊಂಡು ಗುಡ್ಡಕ್ಕೆ ಹೊಂದಿಕೊಂಡಿರುವ ಪಟ್ಟಣ ಪಂಚಾಯತ ಆಸ್ತಿ ಸಂ:1189N ನಿವೇಶನ ತಲುಪುವುದು. | |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| 11 | 11 | ಉತ್ತರಕ್ಕೆ | ವಾಯುವ್ಯ ಮೂಲೆಯ ಬೀಳಗಿ–ಬಾಗಲಕೋಟ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಶ್ರೀ ಸಿದ್ರಾಮಯ್ಯ ಸುರಗಿಮಠ ಇವರ ಜಾಗೆಯಲ್ಲಿ ಇರುವ ಕಟ್ಟಿಗೆ ಅಡ್ಡೆಯಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಬೀಳಗಿ–ಬಾಗಲಕೋಟ ಮುಖ್ಯ ರಸ್ತೆ ಗುಂಟ ಸಾಗಿ ಸಂಗಪ್ಪ ಬುಡ್ಡರ, ಭಾಯಿಸರಕಾರ ಅವರ ವಾಣಿಜ್ಯ ಮಳಿಗೆಗಳ ಮುಂದೆ ಹಾಯ್ದು ಹನಮಂತ ಬನ್ನಟ್ಟಿ ಮನೆಯ ಮುಂದೆ ಸಾಗಿ ಈಶಾನ್ಯ ಮೂಲೆಯಲ್ಲಿರುವ ಕಾರಜೋಳ ಮಳಿಗೆಯಲ್ಲಿರುವ ಗ್ಯಾರೇಜ್ ತಲುಪುವದು. | 841 |
| | | ದಕ್ಷಿಣಕ್ಕೆ | ನೈರುತ್ಯ ಮೂಲೆಯಲ್ಲಿರುವಶ್ರೀ ಬದಾಮಿ ಅವರ ಮನೆಯಿಂದ ಪ್ರಾರಂಭಿಸಿ ಪೂರ್ವಾಭಿಮುಖವಾಗಿ ಚಲಿಸಿ ದೊಡ್ಡಿಹಾಳ ಮಠ ಎಡಕ್ಕೆ ಮಾಡಿಕೊಂಡು ಶ್ರೀ ರಮೇಶ ಹೊನ್ನಿಹಾಳ ಮನೆ ತಲುಪುವದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯ ಕಾರಜೋಳ ಮಳಿಗೆಯಲ್ಲಿರುವ ಗ್ಯಾರೇಜ್‌ದಿಂದಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಚಲಿಸಿ ಮುದ್ದಪ್ಪಗೌಡ ಪಾಟೀಲ, ಮೊಕಾಶಿ, ಪರಶುರಾಮ ಕುರಿ ಮನೆಯ ಮುಂದೆ ಸಾಗಿ ಭೀಮಶಿ ಭಜಂತ್ರಿ ಅವರ ಮನೆಯ ಮುಂದೆ ಹಾಯ್ದು ಶ್ರೀ ರಮೇಶ ಹೊನ್ನಿಹಾಳ ಮನೆ ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಲ್ಲಿರುವಶ್ರೀ ಸಿದ್ರಾಮಯ್ಯ ಸುರಗಿಮಠ ಜಾಗೆಯಲ್ಲಿರುವ ಕಟ್ಟಿಗೆ ಅಡ್ಡೆಯಿಂದ ಪ್ರಾರಂಭಿಸಿ ದಕ್ಷಿಣಾಭಿಮುಖವಾಗಿ ಚಲಿಸಿ ಶ್ರೀಮತಿ: ಶಿವಗಂಗವ್ವ ಹಿರೇಮಠ, ಸುಭಾಸ ಬಾದರದಿನ್ನಿ ಮನೆಯ ಮುಂದೆ ಹಾಯ್ದು ಹನಮಂತ ಮಂಟೂರ ಮನೆಯನ್ನು ತಲುಪುವದು ಅಲ್ಲಿಂದ ಪೂರ್ವಕ್ಕೆ ತಿರುವು ಪಡೆದು ಎನ್.ಎಂ. ಬಿಜಾಪೂರ ಗೋನ್ಯಾಳ ಶಿಕ್ಷಕರಮನೆಯ | |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| | | | ಮುಂದೆ ಸಾಗಿ ಹಾಗೂಬದಾಮಿಯವರ ಮನೆಯ ಮುಂದೆ ಹಾಯ್ದುಗುಡ್ಡಕ್ಕೆ ತಲುಪುವದು. | |

| ಕ್ರ.ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| 12 | 12 | ಉತ್ತರಕ್ಕೆ | ವಾಯುವ್ಯ ಮೂಲೆಯಲ್ಲಿರುವ ಶ್ರೀ ಅಣ್ಣಪ್ಪ ಲೆಂಕನ್ನವರ ಇವರ ಖಾಲಿ ಜಾಗೆಯಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಬೀಳಗಿ- ಬಾಗಲಕೋಟ ಮುಖ್ಯರಸ್ತೆ ಗುಂಟಾಸಾಗಿ ಯು.ಕೆ.ಪಿ ಕಾಲೂನಿ ಹಾಗೂ ಕೆ.ಇ.ಬಿ ಕಾಲೂನಿ ಬಲಕ್ಕೆ ಮಾಡಿಕೊಂಡು ಟಕ್ಕಳಕಿ ಪುನರವಸತಿ ಕೇಂದ್ರದ ರಸ್ತೆ ತಲುಪುವುದು. | 898 |
| | | ದಕ್ಷಿಣಕ್ಕೆ | ನೈಋತ್ಯ ಮೂಲೆಯಲ್ಲಿರುವ ಶ್ರೀ ಮೈಬೂಬಸಾಬ ತಂದೆ ಯಮನೂರಸಾಬ ಬೆಳಗಾಂವಿ ಇವರ ಮನೆಯಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಚಲಿಸಿ ಸರೂರ ಮೇಸ್ತ್ರಿ, ಯು.ಕೆ.ಪಿ ಮತ್ತು ಕೆ.ಇ.ಬಿ ಕಾಲೂನಿಗಳನ್ನು ಎಡಕ್ಕೆ ಮಾಡಿಕೊಂಡು ಶ್ರೀ ಸಿಂಗರೆಡ್ಡಿ ಮನೆಯಮುಂದೆ ಹಾಯ್ದು ಶ್ರೀ ಕುಂದಗೋಳ ಮನೆಯನ್ನು ಎಡಕ್ಕೆ ಮಾಡಿಕೊಂಡು ಟಕ್ಕಳಕಿ ಪುನರ್ವಸತಿ ಕೇಂದ್ರದ ರಸ್ತೆ ತಲುಪುವುದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯ ಬೀಳಗಿ-ಬಾಗಲಕೋಟ ಮುಖ್ಯ ರಸ್ತೆಯಿಂದ ಪ್ರಾರಂಭವಾಗಿ ಶ್ರೀ ಎ.ಆರ್ ಹಲ್ಯಾಳರವರ ಮನೆಯನ್ನು ಬಲಕ್ಕೆ ಮಾಡಿಕೊಂಡು ಕುಂದಗೋಳ ಮನೆ ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯ ಬೀಳಗಿ-ಬಾಗಲಕೋಟ ರಸ್ತೆಯ ಪಕ್ಕದಲ್ಲಿ ಇರುವ ಶ್ರೀ ಅಣ್ಣಪ್ಪ ಲೆಂಕೆಣ್ಣವರ ಇವರ ಪ್ಲಾಟದಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಚಲಿಸಿ ಮಲ್ಲೇಶ ಗಲಗಲಿ, ಹಣಮಂತ ದಳವಾಯಿ, ಶಿಡ್ಲೆಪ್ಪ ಬೀಳಗಿಕರ ಇವರ ಮನೆಯ ಮುಂದೆ ಹಾಯ್ದು ಶ್ರೀ ಮೈಬೂಸಾಬ ಬೆಳಗಾಂವಿ ಇವರ ಮನೆಯನ್ನು ತಲುಪುವದು. | |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | 3 | | 4 |
| 13 | 13 | ಉತ್ತರಕ್ಕೆ | ಈಶಾನ್ಯ ಮೊಲೆಯಿಂದ ಪ್ರಾರಂಭವಾಗಿ ದಕ್ಷಿಣಾಭಿ ಮುಖವಾಗಿ ಚಲಿಸುತ್ತಾ ರಿಸನಂ:90, 89, 213, 214, 217, 218, 219, 231, 38ರ ವಾಯುವ್ಯ ಮೂಲೆ ತಲುಪುವುದು. | 1036 |
| | | ದಕ್ಷಿಣಕ್ಕೆ | ನೈಋತ್ಯ ಮೂಲೆಯ ಗಾಂಧಿ ಸರ್ಕಲದಿಂದ ಪ್ರಾರಂಭವಾಗಿ ತಹಶೀಲ್ದಾರ ಕಛೇರಿಯಿಂದ ಸಾಗಿ ಭಾಗಾಂಶ ರಿಸನಂ:313, 316, | |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | | 3 | 4 |
| | | | 317, 324, 325, 329, 332, 333, 337, 338, 342, 343, 344, 347, 348, 351, 352, 355, 356, 359, 360, 363, 364, 368, 370, 374, 375, 378, 379, 381, 382, 383, 384ರ ಆಗ್ನೇಯ ಮೂಲೆ ತಲುಪುವುದು. | |
| | | ಪೂರ್ವಕ್ಕೆ | ಆಗ್ನೇಯ ಮೂಲೆ ರಿಸನಂ:384ರಿಂದ ಪ್ರಾರಂಭವಾಗಿ 254, 255, 253, 252, 251, 250, 249, 248, 237, 236, 235, 227, 228, 225, 224, 223, 222, 216, 215, 212, 211, 210, 209, 208 ಈಶಾನ್ಯ ಮೂಲೆ ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಿಂದ 38, 37, 36, 35, 241, 242, 243, 244, 245, 246, 247, 262, 261, 260, 272, 284, 283, 282, 281, 280, 279 ಗಾಂಧಿ ಸರ್ಕಲ್ ನೈಋತ್ಯ ಮೂಲೆ ತಲುಪುವುದು. | |

| ಕ್ರ.ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | | 3 | 4 |
| 14 | 14 | ಉತ್ತರಕ್ಕೆ | ಈಶಾನ್ಯ ಮೂಲೆಯ ರಿಸನಂ:46 ರಿಂದ ಪ್ರಾರಂಭವಾಗಿ ರಿಸನಂ:50, 638ರ ವಾಯುವ್ಯ ಮೂಲೆ ತಲುಪುವುದು. | 1083 |
| | | ದಕ್ಷಿಣಕ್ಕೆ | ನೈಋತ್ಯ ಮೂಲೆಯಲ್ಲಿರುವ ರಿಸನಂ:287ರ ಎಮ್.ಪಿ.ಎಸ್ ಶಾಲೆಯಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಚಲಿಸಿ ಜಮಖಂಡಿ ರಸ್ತೆಗುಂಟಾ ಸಾಗಿ ಗೂಡೂರ ಮಳಿಗೆ ಮುಂದೆ ಹಾದು ಬೀಳಗಿ ಬಾಗಲಕೋಟೆ ಮುಖ್ಯ ರಸ್ತೆಯಿಂದ ಚಲಿಸಿ ಗರಡದಿನ್ನಿ ರಸ್ತೆ ಹೊಂದಿರುವ ಆಗ್ನೇಯ ಮೂಲೆ ತಲುಪುವುದು. | |
| | | ಪೂರ್ವಕ್ಕೆ | ಆಗ್ನೇಯ ಮೂಲೆಯ ರಿಸನಂ:269 ರಿಂದ ಹಾಗೂ ವಿದ್ಯಾನಿಕೇತನ ವಿದ್ಯಾ ಸಂಸ್ಥೆಯಿಂದ ಪ್ರಾರಂಭವಾಗಿ ಗರಡದಿನ್ನಿ ರಸ್ತಾಗುಂಟಾ ಸಾಗಿ ಭಾಗಾಂಶ 268, 267, 266, 264, 17, 18, 19, 20, 23, 24, 27, 28, 34, 33, 48, 47, 46ರ ಈಶಾನ್ಯ ಮೂಲೆ ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಿಂದ ರಿಸನಂ. 638, 641, 642, 643, 645, 7, 8, 9ಎ, 1ಎ ರಿಂದ ರಿಸನಂ.237ರ ಎಮ್.ಪಿ.ಎಸ್ ಶಾಲೆ ತಲುಪುವುದು. | |

| ಕ್ರ.ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | | 3 | 4 |
| 15 | 15 | ಉತ್ತರಕ್ಕೆ | ವಾಯುವ್ಯ ಮೂಲೆಯ ಶ್ರೀ ಎಸ್.ಎನ್.ಪಾಟೀಲ ಇವರ ಲೇಔಟ್ ಸಂಖ್ಯೆ 928ಡಿ ಸಿ.ಡಿ ಹತ್ತಿರದಿಂದ ಪ್ರಾರಂಭವಾಗಿ | 961 |

| | | | | |
|---|---|---|---|---|
| | | | ಪೂರ್ವಾಭಿಮುಖವಾಗಿ ಜಮಖಂಡಿ–ಬೀಳಗಿ ರಸ್ತೆ ಗುಂಟಾ ಸಾಗಿ ಶ್ರೀ ಬಸವರಾಜ ಹಣಮಂತ ಹಳ್ಳದಮನಿ ಮನೆ ತಲುಪುವುದು. | |
| | | ದಕ್ಷಿಣಕ್ಕೆ | ನೈಋತ್ಯ ಮೂಲೆಯಲ್ಲಿರುವ ವಿಠ್ಠಲ ಅಡಿವೆಪ್ಪ ಮಂಟೂರಮನೆಯಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಚಲಿಸಿ ಶಿವಪ್ಪ ಓಂಕಾರೆಪ್ಪ ಚಲವಾದಿ ರವರ ಮನೆಮುಂದೆ ಬಲಕ್ಕೆ ತಿರುವು ಪಡೆದು ಎಡಗಡೆ ಇರುವ ನಾಗಪ್ಪ ಸೋಮಪ್ಪ ಚಲವಾದಿ ಇವರ ಮನೆಯ ಮುಂದಿನ ರಸ್ತೆಗುಂಟಸಾಗಿ ಶ್ರೀ ಅಂಬೋರೆ ರವರ ಖಾಲಿ ಜಾಗೆ ಮುಂದೆ ತಿರುವು ಪಡೆದು ಪೂರ್ವಾಭಿಮುಖವಾಗಿ ಶ್ರೀ ಶಿವಪ್ಪ ಚಲವಾದಿ ಅವರ ಮನೆ ಮುಂದು ಸಾಗಿ ಬಲಕ್ಕೆ ತಿರುವು ಪಡೆದು ಎಡಗಡೆ ಇರುವ ಮಹಾದೇವಪ್ಪ ನರೇಗಲ್ಲ ರವರಮನೆ,ಶ್ರೀಶೈಲ ನರೇಗಲ್ಲ ಇವರಪ್ಲಿಂತ್‌ಜಾಗೆ ಮುಂದೆ ಸಾಗಿ ತಿರುವು ಪಡೆದು ಪೂರ್ವಾಭಿಮುಖವಾಗಿ ಚಲಸಿಶ್ರೀ ಸಿದ್ರಾಮಪ್ಪ ಮುರನಾಳ ಮನೆಯ ಮುಂದೆ ಸಾಗಿ ಕುಂಬಾರ ಅವಟಗಿಮುಂದೆ ಹಾಯ್ದು ಬಲಕ್ಕೆ ತಿರುವು ಪಡೆದು ಅಂಗನವಾಡಿಕೇಂದ್ರ ನಂ.15 ಮುಂದೆ ಹಾಯ್ದು ಹಳೇಯ ಅಂಬೇಡ್ಕರ ಸರ್ಕಲ ಮುಂದೆ ಹಾಯ್ದು ಆಸ್ತಿ ನಂ. 937/ಎ ರಲ್ಲಿ ಬರುವ ಅಂಗಡಿಗಳ ಮುಂದೆ ಸಾಗಿ ಬೀಳಗಿ–ಜಮಖಂಡಿ ಮುಖ್ಯ ರಸ್ತೆಗೆತಲುಪುವುದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯಲ್ಲಿರುವ ಶ್ರೀ ಬಸವರಾಜ ಹಣಮಂತ ಹಳ್ಳದಮನಿ ಇವರ ಮನೆಯಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಚಲಿಸಿ ಆಗ್ನೇಯ ಮೂಲೆಯಲ್ಲಿ ಇರುವ ಆಸ್ತಿ ಸಂಖ್ಯೆ 937ಎ ರಲ್ಲಿ ಬರುವ ಅಂಗಡಿಯನ್ನು ತಲುಪುವುದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಲ್ಲಿರುವ ಶ್ರೀ ಎಸ್.ಎನ್. ಪಾಟೀಲ ಇವರ ಲೇಔಟ್ ಸಂಖ್ಯೆ 928ಡಿ ಹತ್ತಿರವಿರುವಸಿ.ಡಿಯಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಚಲಿಸಿ ಶ್ರೀದಸಗೀರಸಾಬ ಮುಜಾವರ, ಹುಚ್ಚಯ್ಯ ಯಂಕಂಚಿ, ಬಾಬು ಸಮಗಾರ ಇವರ ಆಸ್ತಿಗಳನ್ನು ಎಡಕ್ಕೆ ಮಾಡಿಕೊಂಡು ಶ್ರೀ ವಿಠ್ಠಲ ಅಡಿವೆಪ್ಪ ಮಂಟೂರ ಮನೆಯನ್ನುತಲುಪುವುದು. | |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| **1** | **2** | | **3** | **4** |
| 16 | 16 | ಉತ್ತರಕ್ಕೆ | ವಾಯುವ್ಯ ಮೂಲೆಯಲ್ಲಿರುವ ಶ್ರೀ ಸುಭಾಸ ಮೋದಿ ರವರ ಅಡತಿ ಅಂಗಡಿಯಿಂದ ಪ್ರಾರಂಭವಾಗಿ ಪೂರ್ವಾಭಿಮುಖವಾಗಿ ಚಲಿಸಿ ಶ್ರೀ ನಿಂಗಪ್ಪ ನಿಡಗುಂದಿ ಶ್ರೀ ಹಣಮಂತ ದೇವಜಿ ಅಂಬೋರೆ ಇವರ ಮನೆಗಳನ್ನು ಬಲಕ್ಕೆ ಮಾಡಿಕೊಂಡು ಶ್ರೀ ಹುಸೇನಫೀರ ದರ್ಗಾದ ನಗಾರಿಖಾನೆಯನ್ನು ತಲುಪಿ ಅಲ್ಲಿಂದ ಯಡಕ್ಕೆ ತಿರುವುಪಡೆದು ಉತ್ತರಾಭಿಮುಖವಾಗಿ ಚಲಿಸಿ ಶ್ರೀ ಚನ್ನಬಸಪ್ಪ ಕುಂಬಾರ ಇವರ ಮನೆಯನ್ನು ತಲುಪಿ ಅಲ್ಲಿಂದ ಬಲಗಡೆ ತಿರುವುಪಡೆದು ಶ್ರೀ ನಾಗಲಕ್ಷೀ ದೇವಸ್ಥಾನದ ಕಟ್ಟೆಯನ್ನು ಬಲಕ್ಕೆ ಮಾಡಿಕೊಂಡು ಶ್ರೀ ಮಕಾನದಾರ ಶಿಕ್ಷಕರ ಮನೆ ತಲುಪುವುದು. | 1103 |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| **1** | **2** | | **3** | **4** |
| | | ದಕ್ಷಿಣಕ್ಕೆ | ನೈಋುತ್ಯ ಮೂಲೆಯಲ್ಲಿರುವ ಶ್ರೀ ಬೀರೇಶ್ವರ ದೇವಸ್ಥಾನದಿಂದ ಪ್ರಾರಂಭವಾಗಿ ಶ್ರೀಮತಿ ಶಾಂತವ್ವ ಕಣವಿ ಇವರ ಮನೆ, ಲಕ್ಕಣ್ಣವರ ಇವರ ಖಾಲಿ ಜಾಗೆ ಹಾಗೂ ಶ್ರೀಶೈಲ ಕಣವಿ ಮನೆಗಳನ್ನು ಎಡಕ್ಕೆ ಮಾಡಿಕೊಂಡು ಆಗ್ನೇಯ ಮೂಲೆಯಲ್ಲಿರುವ ಪೋಸ್ಟ್ ಆಫೀಸ್ ತಲುಪುವದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯಲ್ಲಿರುವ ಶ್ರೀ ಮಕಾನದಾರ ಶಿಕ್ಷರ ಮನೆಯಿಂದ ಪ್ರಾರಂಭವಾಗಿ ಶ್ರೀ ಮರಗಮುಗಮನ ದೇವಸ್ಥಾನ ಹಾಗೂ ಹೊಸ ಪಟ್ಟಣ ಪಂಚಾಯತಿಯ ಕಚೇರಿಯನ್ನು ಬಲಕ್ಕೆ ಮಾಡಿಕೊಂಡು ಅಂಬೇಡ್ಕರ ಸರ್ಕಲ್ ಸುತ್ತುವರೆದು ಪೊಲೀಸ್ ವಸತಿ ಗೃಹಗಳ ಮುಂದೆ ಹಾಯ್ದು ಪೋಸ್ಟ್ ಆಫೀಸ್ ತಲುಪುವದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಲ್ಲಿರುವ ಶ್ರೀ ಸುಭಾಸ ಮೋದಿ ಇವರ ಅಡತಿ ಅಂಗಡಯಿಂದ ಪ್ರಾರಂಭವಾಗಿ ಸರ್ಕಾರಿ ಗ್ರಾಮ ಚಾವಡಿಯನ್ನು ಎಡಕ್ಕೆ ಮಾಡಿಕೊಂಡು ಅಲ್ಲಿಂದ ಪೂರ್ವಾಭಿಮುಖವಾಗಿ ತಿರುವು ಪಡೆದು ಎಡಗಡೆ ಬರುವ ಶ್ರೀ ಬಸವ ಆಸ್ಪತ್ರೆ, ಸಂಗಪ್ಪ ಬಳಿಗಾರ ಇವರ ಮನೆ ಹಾಗೂ ಕಾತರಕಿ ಇವರ ಮಳಿಗೆಯನ್ನು ಎಡಕ್ಕೆ ಮಾಡಿಕೊಂಡು ದಕ್ಷೀಣಾಭಿಮುಖವಾಗಿ ಚಲಿಸಿ ಶ್ರೀ ಎಲ್.ಎಸ್.ನಾಯ್ಕರ ಇವರ ಮನೆಯ ಮುಂದೆ ಹಾಯ್ದು ನೈರುತ್ಯ ದಿಕ್ಕಿನಲ್ಲಿರುವ ಶ್ರೀ ಬೀರೇಶ್ವರ ದೇವಸ್ಥಾನ ತಲಪುವುದು. | |

| ಕ್ರ.ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| **1** | **2** | | **3** | **4** |
| 17 | 17 | ಉತ್ತರಕ್ಕೆ | ವಾಯುವ್ಯ ಮೂಲೆಯಲ್ಲಿರುವ ಬೀಳಗಿ–ಜಮಖಂಡಿ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಶ್ರೀ ಚೌದರಿ ಇವರ ರಿ.ಸ.ನಂ:11ರ ಹತ್ತಿರ ಇವರುವ ರಸ್ತೆಯ ಸಿ.ಡಿ .ಯಿಂದ ಪ್ರಾರಂಭವಾಗಿ ದಕ್ಷೀಣಾಭಿಮುಖವಾಗಿ ಚಲಿಸಿ ಶಾಧಿಮಹಲ್ ಕಂಪೌಂಡ್ ಗೋಡೆ ತಲುಪಿ ಎಡಕ್ಕೆ ತಿರುವು ಪಡೆದು ಪೂರ್ವಾಭಿಮುಖವಾಗಿ ಚಲಿಸಿ ಈಶಾನ್ಯ ಮೂಲೆಯಲ್ಲಿರುವ ಶಾಧಿಮಹಲ ಕಂಪೌಂಡ್ ಗೋಡೆ ತಲುಪುವದು. ಅಲ್ಲಿಂದ ಬಲಕ್ಕೆ ತಿರುವು ಪಡೆದು ಶ್ರೀಮಲ್ಲಪ್ಪ ಜೈನಾಪೂರ ಮನೆ ತಲುಪುವದು. | 1067 |
| | | ದಕ್ಷಿಣಕ್ಕೆ | ನೈಋುತ್ಯ ಮೂಲೆಯಲ್ಲಿರುವ ಶ್ರೀ ಮಹಮ್ಮದಶಫಿ ಖಾಜಿ ಇವರ ಮನೆಯಿಂದ ಪ್ರಾರಂಭವಾಗಿ ಪೂರ್ವಾಭಿಮೂಕವಾಗಿ ಚಲಿಸಿ ಶ್ರೀಮತಿ ಜೈತುನಭಿ ಚೌಧಿರಿ ಮನೆ, ಶ್ರೀಅಮೀನಸಾಬ ಬಡೇಘರ ಇವರ ಮನೆಯನ್ನು ಎಡಕ್ಕೆ ಮಾಡಿಕೊಂಡು | |

| ಕ್ರ.ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | | 3 | 4 |
| | | | ಶ್ರೀಮತಿ ಕಾಶವ್ವ ಬಳಿಗಾರ ಇವರ ಮನೆಗೆ ತಲುಪಿ ಅಲ್ಲಿಂದ ಬಲಗಡೆ ತಿರುವು ಪಡೆದು ಎಡಗಡೆ ಬರುವ ಎಲ್ಲಾ ಆಸ್ತಿಗಳನ್ನು ಸೇರಿಸಿಕೊಂಡು ಶ್ರೀ ಸಧಾನಂದ ಅಮರಪ್ಪ ಶೆಟ್ಟರ ಮನೆಯ ಮುಂದೆ ಹಾಯ್ದು ಶ್ರೀ ವೆಂಕಪ್ಪ ಅಂಬೋರೆ ಇವರ ಅಂಗಡಿ ಮೂಲೆ ತಲುಪಿ ಅಲ್ಲಿಂದ ಎಡಕ್ಕೆ ತಿರುವು ಪಡೆದು ಪೂರ್ವಾಭಿಮುಖವಾಗಿ ಚಲಿಸಿ ಶ್ರೀಮಲ್ಲಿಕಾರ್ಜುನ ದೇವಸ್ಥಾನದ ಮುಂದೆ ಹಾಯ್ದು ಶ್ರೀ ಹುಸೇನಫೀರ ದರ್ಗಾ ತಲುಪುವದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯಲ್ಲಿರುವ ಶ್ರೀ ಮಲ್ಲಪ್ಪಾ ಜೈನಾಪೂರ ಇವರ ಮನೆಯಿಂದ ಪ್ರಾರಂಭಿಸಿ ದಕ್ಷೀಣಾಭಿಮುಖವಾಗಿ ಚಲಿಸಿ ಶ್ರೀ ಸಿದ್ದು ದಳವಾಯಿ, ಮಲ್ಲಪ್ಪ ನರೇಗಲ್ಲ ಇವರುಗಳ ಮನೆಯ ಮುಂದೆ ಹಾಯ್ದು ಆಗ್ನೇಯ ಮೂಲೆಯಲ್ಲಿರುವ ಶ್ರೀ ಹುಸೇನಫೀರ ದರ್ಗಾ ಹಾಗೂ ಶ್ರೀ ಶೇಖಪ್ಪ ಶಾಹಪೂರ ಅಂಗಡಿ ತಲುಪುವದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯಲ್ಲಿರವ ಬೀಳಗಿ-ಜಮಖಂಡಿ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಶ್ರೀ ಚೌಧರಿಯವರ ಜಮೀನಿನ ರಿ.ಸ.ನಂ:11ರ ಹತ್ತಿರ ವಿರುವ ಸಿ.ಡಿ ಯಿಂದ ಪ್ರಾರಂಭಿಸಿ ಬೀಳಗಿ ಪಟ್ಟಣದ ರಿ.ಸ.ನಂ:12ರಲ್ಲಿರುವ ಸಾರ್ವಜನಿಕ ಕೆರೆಯ ಏರಿಗುಂಟ ಸಾಗಿ ಹಳೆಯ ಸ್ತ್ರೀಯರ ಶೌಚಾಲಯವನ್ನು ಎಡಕ್ಕೆ ಮಾಡಿಕೊಂಡು ದಕ್ಷೀಣಭಿಮುಖವಾಗಿ ಚಲಿಸಿ ಶ್ರೀ ಮಹಮ್ಮದಶಫಿ ಖಾಜಿರವರ ಮನೆ ತಲುಪುವದು. | |

| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | | 3 | 4 |
| 18 | 18 | ಉತ್ತರಕ್ಕೆ | ರಿ.ಸ.ನಂ. 474ರ ವಾಯ್ಯುವ ಮೂಲೆಯಿಂದ ಉತ್ತರ ತುದಿಗುಂಟ ಪ್ರಾರಂಭವಾಗಿ ರಿ.ಸ.ನಂ. 477, 610, 614, 612 ಗಡಿ ಗುಂಟಾ ಪ್ರಾರಂಭವಾಗಿ ಬಳ್ಳೂರು ರಸ್ತೆ ಗುಂಟಾ ಬಂದು ಭಾಗಶಃ ರಿಸ.ನಂ. 638 ತಲುಪುವದು. | 1080 |
| | | ದಕ್ಷಿಣಕ್ಕೆ | ನೈಋತ್ಯ ಮೂಲೆಯ ರಿ.ಸ.ನಂ. 448 ರಿಂದ ಪ್ರಾರಂಭವಾಗಿ ರಿ.ಸ.ನಂ. 446, 447, 445, 457, 458, 460, 461ಜಮೀನಿನ ಗಡಿ ಗುಂಟಾ ಸಾಗಿ ಬೀಳಗಿ-ಜಮಖಂಡಿ ಮುಖ್ಯ ರಸ್ತೆಎಡಬದಿ ಮೂಲಕ ಸಾಗಿ ಸಿಂಧೂರ ಲಕ್ಷ್ಮಣ ವೃತ್ತದಿಂದ ಎಡಭಾಗ ತಿರುವು ಪಡೆದುಕೊಂಡು ರಿ.ನಂ 654 ಹದ್ದಿಗುಂಟ ಸಾಗಿ 655, 659ರ | |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಕ್ರ. ಸಂ. | ವಾರ್ಡ್ ಸಂಖ್ಯೆ | ವಾರ್ಡಿನ ಚೆಕ್‌ಬಂದಿ | | ಒಟ್ಟು ಜನಸಂಖ್ಯೆ |
|---|---|---|---|---|
| 1 | 2 | | 3 | 4 |
| | | | ಮೂಲೆಗೆ ಸೇರುವದು. ಅಲ್ಲಿಂದ ಮರಾಠ ಸಮುದಾಯ ಭವನದ ಮುಂದೆ ಹಾಯ್ದು ಸಿ. ಜೆ. ಬಾಗಲಕೋಟ ಮನೆಯ ಮುಂದೆ ಹಾಯ್ದು ಕೆರೂರ ಕಿರಾಣಿ ಅಂಗಡಿಯ ಆಗ್ನೇಯ ಮೂಲೆ ತಲುಪುವದು. | |
| | | ಪೂರ್ವಕ್ಕೆ | ಈಶಾನ್ಯ ಮೂಲೆಯ ಭಾಗಶಃ ರಿಸನಂ. 638, 639, 641, 642, 643, 15, 14, 646, 11ಎ ರಿಂದ ಪ್ರಾರಂಭವಾಗಿ ಬೀಳಗಿ–ಜಮಖಂಡಿ ರಸ್ತೆ ಗುಂಟಾ ಬಂದ ರಿಸನಂ. 13ಕ ಗಡಿಗುಂಟಾ ಸಾಗಿ ರಿ.ಸ,ನಂ.12 ಸಾರ್ವಜನಿಕ ಕೆರೆಯ ಗುಂಟಾ ಸಾಗಿ ಸೋಮಪ್ಪಯ್ಯನ ಮಠದ ಹತ್ತಿರ ಬಲಭಾಗದ ಪ್ಯಾಟಿಮಠರವರ ಮನೆಯ ಸಂದಿ ಗುಂಟಸಾಗಿ ಮಹಮ್ಮದ ಮುಜಾವರ ಮನೆ ಮುಂದೆ ಹಾಯ್ದು ಶೇಖವ್ವ ಅಣೆಪ್ಪನವರ ಮನೆಯ ಹತ್ತಿರ ತಿರುವು ಪಡೆದು ಅಜೀತ ಕೊಪ್ಪದ ಇವರ ಅರಿವೆ ಅಂಗಡಿ ಮುಂದೆ ಹಾಯ್ದು ಶ್ರೀಬಸವೇಶ್ವರ ಸರ್ಕಲ್ ಬಲಕ್ಕೆ ಮಾಡಿಕೊಂಡು ಕೆರೂರ ಅಂಗಡಿಯ ಆಗ್ನೇಯ ಮೂಲೆ ತಲುಪುವದು. | |
| | | ಪಶ್ಚಿಮಕ್ಕೆ | ವಾಯುವ್ಯ ಮೂಲೆಯ ರಿಸನಂ. 477,473,450,449 ರ ಗಡಿಯಿಂದ ಪ್ರಾರಂಭವಾಗಿ ಅದೇ ಗಡಿ ಗುಂಟಾ ಮುಂದೆ ಸಾಗಿ ರಿ.ಸ.ನಂ. 448ರ ಜಮೀನಿನ ನೈಋತ್ಯ ಮೂಲೆ ಹಾಗೂ ಬೀಳಗಿ ಜಮಖಂಡಿ ಮುಖ್ಯ ರಸ್ತೆ ತಲುಪುವದು. | |

**ಉಪವಿಭಾಗಾಧಿಕಾರಿಗಳು**
**ಜಮಖಂಡಿ**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.
SOMASHEKAR B E